# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1262**

**ಸದಸ್ಯರ ಹೆಸರು : ಶ್ರೀ ಕುಶಾಲಪ್ಪ ಎಂ.ಪಿ (ಸುಜಾ)., (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಉತ್ತರಿಸುವ ಸಚಿವರು : ಗಣಿ ಮತ್ತು ಭೂ-ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು**

**ಉತ್ತರಿಸುವ ದಿನಾಂಕ : 18/03/2025.**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೊಡಗು ಜಿಲ್ಲೆಯ ಮಡಿಕೇರಿಯ ರಾಜಾ ಸೀಟ್ ಬಳಿ 15 ವರ್ಷಗಳ ಕಾಲ ಚಾಲ್ತಿಯಲ್ಲಿರುವ ಟಾಯ್ ಟ್ರೈನ್ ಅನ್ನು 2018-19 ನೇ ಸಾಲಿನಲ್ಲಿ ಸ್ಥಗಿತಗೊಳಿಸಲು ಕಾರಣವೇನು; | ಟಾಯ್ ಟ್ರೈನ್ 1991ರಲ್ಲಿ ಪ್ರಾರಂಭಗೊಂಡು 2016ರವರೆವಿಗೂ ಚಾಲನೆಯಲ್ಲಿದ್ದು, 2016ರಲ್ಲಿ ಸ್ಥಗಿತಗೊಳಿಸಲಾಗಿರುತ್ತದೆ. ಸುಮಾರು 25 ವರ್ಷಗಳ ಕಾಲ ಟ್ರೈನ್ ಚಾಲ್ತಿಯಲ್ಲಿದ್ದು ತದನಂತರ ಅದರ ಟ್ರಾಕ್, ಬೋಗಿ, ಇಂಜಿನ್‌ಗಳು ದುರಸ್ಥಿಗೆ ಒಳಪಟ್ಟು, ದುರಸ್ಥಿ ಸಾಧ್ಯವಾಗದೇ ಓಡಾಟವನ್ನು ಸ್ಥಗಿತಗೊಳಿಸಲಾಗಿರುತ್ತದೆ.<br><br>ಮಕ್ಕಳ ಟಾಯ್ ಟ್ರೈನ್ ಘಟಕವು ಗ್ರೇಟರ್ ರಾಜಾಸೀಟ್ ಉದ್ಯಾನವನದ ಒಂದು ಭಾಗವಾಗಿದ್ದು, ಇದನ್ನು ಈ ಮೊದಲು ಮಡಿಕೇರಿ ನಗರಸಭೆಯ ವತಿಯಿಂದ ಅಭಿವೃದ್ಧಿಪಡಿಸಿ ಇದರಿಂದ ಬರುವ ಆದಾಯ ಮತ್ತು ಖರ್ಚನ್ನು ನಗರಸಭೆಯ ವತಿಯಿಂದಲೇ ನಿರ್ವಹಣೆ ಮಾಡಲಾಗುತ್ತಿತ್ತು. ಮಕ್ಕಳ ಟ್ರೈನ್ ಘಟಕವು ನಗರಸಭೆ ವತಿಯಿಂದ ನಿರ್ವಹಣೆ ಮಾಡುತ್ತಿದ್ದ ಸಂದರ್ಭದಲ್ಲಿಯೇ ಹಾನಿಯಾಗಿದ್ದು, ಓಡಾಟವು ಸ್ಥಗಿತಗೊಂಡಿರುತ್ತದೆ. ನಂತರದ ಅವಧಿಯಲ್ಲಿ ಎಂದರೆ ದಿನಾಂಕ: 09.08.2021 ರಂದು ಗ್ರೇಟರ್ ರಾಜಾಸೀಟ್ ಉದ್ಯಾನವನವು ತೋಟಗಾರಿಕೆ ಇಲಾಖೆಗೆ ಹಸ್ತಾಂತರವಾಗಿರುತ್ತದೆ. ಸದರಿ ಜಮೀನು ಹಸ್ತಾಂತರವಾಗುವ ಸಂದರ್ಭದಲ್ಲಿ ಮಕ್ಕಳ ಟ್ರೈನ್ ಘಟಕಕ್ಕೆ ಸಂಬಂಧಿಸಿದಂತೆ ಕಡತ ಮತ್ತು ಸಾಮಗ್ರಿಗಳನ್ನು ನಗರಸಭೆಯಿಂದ ಹಸ್ತಾಂತರಿಸಿರುವುದಿಲ್ಲ.<br><br>The toy train started during 1991 and has operated till 2016, then it is stopped during 2016. The train |

| | | |
|---|---|---|
| | | had been in operation for about 25 years and later its track, bhogi, engine came to repair but could not be repaired hence, it is not in operation.<br>Childern's Toytrain unit is a part of the Greater Raja seat Park, which was previously developed by the Municipal Council, Madikeri and the income and expenses generated from it were managed by the Municipal Council, Madikeri. The children's toy train unit's operations were damaged while it was being maintained by the Municipal council. Later, date: 09.08.2021, the Greater Raja seat Park was handed over to the Horticulture Department. When Greater Raja seat land was handed over to the department, the file and the materials related to the children's toy train unit were not handed over by the Municipal council. |
| ಆ) | ಸದರಿ ಟಾಯ್ ಟ್ರೈನ್ ದುರಸ್ತಿ ಕಾರ್ಯವನ್ನು ಕೈಗೊಳ್ಳಲು ಬೇಕಾಗುವ ಅನುದಾನ ಎಷ್ಟು; | ಸದರಿ ಟಾಯ್ ಟ್ರೈನ್ ದುರಸ್ಥಿ ಕಾರ್ಯವನ್ನು ಕೈಗೊಳ್ಳಬೇಕಾಗುವ ಅನುದಾನದ ಅಂದಾಜು ಮಾಡಲಾಗಿರುವುದಿಲ್ಲ.<br>The budget required to toy train repair work has not been estimated. |
| ಇ) | ಇದನ್ನು ಪುನರಾರಂಭಿಸಲು ಇಲಾಖಾ ಪರಿಣಿತರು ಪರಿಶೀಲಿಸುವ ತಾಂತ್ರಿಕ ಕಾರ್ಯವು ಕೈಗೊಳ್ಳಲಾಗಿದೆಯೇ; ಯಾವ ಹಂತದಲ್ಲಿದೆ; ಮತ್ತು ಯಾವ ಕಾಲಮಿತಿಯೊಳಗೆ ಇದನ್ನು ಪುನರಾರಂಭಿಸಲಾಗುವುದು? | ಟಾಯ್ ಟ್ರೈನ್ ಅನ್ನು ಪುನರಾರಂಭಿಸುವ ಬಗ್ಗೆ ಮೈಸೂರು ವಿಭಾಗದ ದಕ್ಷಿಣ-ಪಶ್ಚಿಮ ಅಧಿಕಾರಿಗಳು ರೇಲ್ವೆ ಹಳಿ, ಭೋಗಿ ಹಾಗೂ ರೈಲ್ ಇಂಜಿನ್ ಅನ್ನು ಹೊಸದಾಗಿ ಅಳವಡಿಸಲು ಸ್ಥಳ ಪರಿಶೀಲನೆ ನಡೆಸಿ ಅಂದಾಜು ಪಟ್ಟಿ ಸಲ್ಲಿಸಲು ತೋಟಗಾರಿಕೆ ಇಲಾಖೆಯಿಂದ ಕೋರಲಾಗಿದೆ. ಸಂಬಂಧಿಸಿದ ರೇಲ್ವೆ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿದ್ದು ತಾಂತ್ರಿಕ ಮಾಹಿತಿ ಮತ್ತು ಅಂದಾಜು ಪಟ್ಟಿಯನ್ನು ನಿರೀಕ್ಷಿಸಲಾಗುತ್ತಿದೆ. ಈ ಬಗ್ಗೆ ಕಾಲಮಿತಿಯನ್ನು ನಿರ್ಧರಿಸಿರುವುದಿಲ್ಲ.<br>Regarding the resumption of the toy train, Horticulture department have requested the South-West Railway officials of Mysore division to conduct |

| | | |
|---|---|---|
| | | a site inspection and submit an estimate for the installation of new railway tracks, bogies and rail engines. The concerned railway officials have inspected the site and department is awaiting for the technical information and estimates. No time limit is set. |

ಸಂಖ್ಯೆ: HORTI 114 HGM 2025

S. S. Mallikarjun

(ಎಸ್. ಎಸ್. ಮಲ್ಲಿಕಾರ್ಜುನ್)
ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು